# ಮೇಣ ಮಲ್ಲಿಗೆಯ ಮೋಹಕತೆ



■ ಚಿತ್ರ– ಬರಹ: **ಲತಾ ಹೆಗಡೆ**

ಪೊದರಿನಂತೆ ಬೆಳೆಯುವ ಕಡುಹಸುರಿನ ಉದ್ದುದ್ದ ಚೂಪು ಎಲೆಗಳನ್ನು ಹೊಂದಿದ ಈ ಸಸ್ಯ ಸುಮಾರು 3ರಿಂದ 4 ಅಡಿಗಳಷ್ಟು ಎತ್ತರಕ್ಕೆ ಬೆಳೆಯಬಲ್ಲದು. ಹೂವುಗಳು ಕಾಂಡದ ತುದಿಯಲ್ಲಿರುವ ಎಲೆಗಳ ಮಧ್ಯ ಭಾಗದಲ್ಲಿ ಒಂಟಿ ಅಥವಾ ಜೊತೆಯಾಗಿ ಬಿಡುತ್ತವೆ. ಹಳದಿ ಬಣ್ಣದ ಈ ಹೂವುಗಳು ಮೃದು. ಅತೀ ಮೃದುತ್ವದ ಕಾರಣ ಇದಕ್ಕೆ 'ಮೇಣ ಮಲ್ಲಿಗೆ' ಎನ್ನುತ್ತಾರೆ.

ಹೂವಿನಲ್ಲಿ 5 ಪಕಳೆಗಳಿದ್ದು 5 ಪುಷ್ಪ ದಳಗಳಿವೆ. ಕಾಯಿಗಳು ಗೋಳಾಕಾರದಲ್ಲಿದ್ದು ಶುಷ್ಕ ಫಲವಾಗಿವೆ. ಇವುಗಳನ್ನು ವೈಜ್ಞಾನಿಕವಾಗಿ 'ಕ್ಯಾಪ್ಸೂಲ್' ಎನ್ನುತ್ತಾರೆ. ಕನ್ನಡದಲ್ಲಿ ಪುಷ್ಕರಣಿ ಎಂದು ಕರೆಯಲ್ಪಡುವ ಈ ಗಿಡದ ಸಸ್ಯ ಶಾಸ್ತ್ರೀಯ ಹೆಸರು ಟರ್ನೆರಾ ಅಲ್ಮಿಫೋಲಿಯ (Turnera Ulmifolia). ಯಾರ್ಕ್‌ ಪ್ರದೇಶದ  ವಿಲಿಯಮ್ ಟರ್ನರ್ ಅವರ ಗೌರವಾರ್ಥ ಈ ಟರ್ನೆರಾ ಹೆಸರು ಜೋಡಣೆಯಾಗಿದೆ. ಇದರ ಎಲೆಗಳ ಉದ್ದ ಸುಮಾರು 5ರಿಂದ 8 ಸೆಂ.ಮೀ. ಎಲೆಗಳು ಕಾಂಡದ ತುದಿಯಲ್ಲಿ ಗುಂಪಾಗಿರುತ್ತವೆ. ಹೂವು ಮತ್ತು ಕಾಯಿ ಬಿಡುವ ಕಾಲ ಜೂನ್ ತಿಂಗಳಿನಿಂದ ಡಿಸೆಂಬರ್‌ವರೆಗೆ.

## ಔಷಧೀಯ ಉಪಯೋಗ

ಬೇರಿನ ಅಥವಾ ಸಮೂಲದ ಚೂರ್ಣವನ್ನು ಒಂದು ಬಾರಿಗೆ ಎರಡು ಚಮಚದಂತೆ ದಿನಕ್ಕೆರಡು ಬಾರಿ ಸೇವಿಸುವುದರಿಂದ ಪಿತ್ತ ದೋಷದಿಂದ ಉಂಟಾದ ಅಜೀರ್ಣ ಮತ್ತು ವಾಯು ನೋವು ಕಡಿಮೆಯಾಗುತ್ತದೆ. ಎಲೆಯ ಕಷಾಯ ಮಾಡಿ ಕಾಲು ಲೋಟಕ್ಕೆ ಸ್ವಲ್ಪ ಜೇನುತುಪ್ಪ ಸೇರಿಸಿ ದಿನಕ್ಕೆ 2–3 ಬಾರಿ ಸೇವಿಸಿದಲ್ಲಿ ಭೇದಿ ತಹಬಂದಿಗೆ ಬರುತ್ತದೆ. ಈ ಸಸ್ಯದಿಂದ ಬೇರ್ಪಡಿಸಿದ ಸತ್ವಕ್ಕೆ ಊತ ಶಮನಮಾಡುವ ಗುಣವಿದೆಯಾದರೂ ಇದು ನೋವು ನಿವಾರಕವಲ್ಲ. ಅಲಂಕಾರಿಕ ಸಸ್ಯವನ್ನಾಗಿ ಬಲು ಸುಲಭವಾಗಿ ಇದನ್ನು ಎಂತಹ ವಾತಾವರಣದಲ್ಲೂ, ಮಣ್ಣಿನಲ್ಲೂ ಬೆಳೆಯಬಹುದು. ●